ಅಥವಾ ಇಲ್ಲವೋ" ಎಂಬಂತಹ ಮೃತೋತ್ತರಗತಿಯ ವಿಷಯವನ್ನು ತಿಳಿಯಪಡಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದು ದೇವತೆಗಳಿಂದಲೂ ಅರಿಯಲಾಗದ ವಿಷಯವಾದ್ದರಿಂದ ಆ ವಿಷಯದ ಬದಲಾಗಿ ಬೇರೇನನ್ನಾದರೂ, ಅಂದರೆ ಅಷ್ಟೈಶ್ವರ್ಯ ಸಂಪತ್ತುಗಳನ್ನೋ, ಸಮಗ್ರ ಭೂಮಂಡಲದೊಡೆತನವನ್ನೋ, ದೀರ್ಘಾಯುಸ್ಸನ್ನೋ, ಪುತ್ರ–ಪೌತ್ರಾದಿ ಸೌಭಾಗ್ಯವನ್ನೋ ಕೇಳಿ ಪಡೆಯುವಂತೆ ಯಮನು ನಚಿಕೇತನಿಗೆ ಆಶೆಯೊಡ್ಡುತ್ತಾನೆ. ಬಾಲಕನಾದರೂ ಈ ರೀತಿಯ ಯಾವ ಆಮಿಷಗಳಿಗೂ ಬಾಗದೆ, ನಚಿಕೇತನು ಶ್ರೇಯಸ್ಕಾಮನಾದ, ಮುಮುಕ್ಷುವಾದ ಪ್ರತಿಯೊಬ್ಬನೂ ನುಡಿಯಬೇಕಾದ, ದಿಟವಾದ ದಿಟ್ಟವಾದ ಉತ್ತರವನ್ನು ಕೊಡುತ್ತಾನೆ. **ನ ವಿತ್ತೇನ ತರ್ಪಣೀಯೋ ಮನುಷ್ಯಃ** – ಮನುಷ್ಯನನ್ನು ಐಶ್ವರ್ಯದಿಂದ ಎಂದೆಂದಿಗೂ ತೃಪ್ತಿಪಡಿಸಲಾಗುವುದಿಲ್ಲ. ಇಂದ್ರಿಯಗಳನ್ನು ತೃಪ್ತಿಪಡಿಸುವ ಭೋಗಗಳಿಂದ ಶರೀರೇಂದ್ರಿಯಗಳು ಕುಗ್ಗುತ್ತವೆಯೇ ಹೊರತು ನೈಜತೃಪ್ತಿಯು ದೊರಕುವುದಿಲ್ಲ. **ಸರ್ವೇಂದ್ರಿಯಾಣಾಂ ಜರಯಂತಿ ತೇಜಃ** ಎಂಬಂತೆ ಇಂದ್ರಿಯಗಳು ತೇಜಸ್ಸನ್ನು ನಾಶಮಾಡುತ್ತವೆ. ಹಾಗೆಯೇ, ಆಯುಸ್ಸೆಂಬುದು ವರವಾಗಿ ಪಡೆಯಬೇಕಾದ ವಿಷಯವಲ್ಲ. ಯಮನು ಬಯಸಿದಷ್ಟು ಕಾಲ ಮನುಷ್ಯನು ಜೀವಿಸಿಯೇ ಜೀವಿಸುತ್ತಾನೆ. ಹೀಗಾಗಿ ನಚಿಕೇತನು ಮೃತೋತ್ತರ ಗತಿಯ ವಿಷಯವನ್ನು ಹೊರತುಪಡಿಸಿ, ಮತ್ತಾವ ವಿಷಯವೂ ತನಗೆ ಬೇಡವೆಂದು ಯಮನನ್ನು ನಿರ್ಬಂಧಪಡಿಸುತ್ತಾನೆ. ನಿರ್ವಾಹವಿಲ್ಲದೆ, ಯಮನು ಆ ರಹಸ್ಯವನ್ನು ನಚಿಕೇತನಿಗೆ ತಿಳಿಸುತ್ತಾನೆ.

**ಆತ್ಮಸ್ವರೂಪ :** ಆತ್ಮತತ್ತ್ವವೆಂಬುದು ಕೇಳಿದಾಕ್ಷಣ ತಿಳಿದುಬರುವ, ಬುದ್ಧಿಗೆ ನಿಲುಕುವ ವಿಷಯವಲ್ಲ; ಕೇಳಿದರೂ ತಿಳಿಯದ ವಿಷಯವದು. ಸೂಕ್ಷ್ಮಾತಿಸೂಕ್ಷ್ಮವಾದ ಇದು **ನೈಷಾ ತರ್ಕೇನ ಮತಿರಾಪನೇಯಾ** – ಬುದ್ಧಿಯ ತರ್ಕದಿಂದಲೂ ಅರಿಯಲು ಅಸಾಧ್ಯವಾದದ್ದು. ಹೃದಯಗುಹೆಯಲ್ಲಿ ಅಡಗಿರುವ ಈ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಂತಹ ಧೀರರಾದ ಋಷಿಗಳ ಧೀರವಾಣಿಯು ಆ ಪರಮಾತ್ಮತತ್ತ್ವವನ್ನು ಈ ರೀತಿಯಾಗಿ ನಿರ್ದೇಶಿಸುತ್ತದೆ: "ಬ್ರಹ್ಮಚರ್ಯವ್ರತದಿಂದ ಪ್ರಾಪ್ತವಾಗುವ ಪರಮಪದವನ್ನೇ 'ಓಂಕಾರ' ವೆಂದು ಹೇಳುತ್ತಾರೆ. ಈ ಆತ್ಮತತ್ತ್ವವು ಹುಟ್ಟು–ಸಾವುಗಳಿಲ್ಲದ್ದೂ, ಅಜವೂ, ನಿತ್ಯವೂ, ಶಾಶ್ವತವೂ, ಪುರಾಣವೂ, ನಿತ್ಯನೂತನವೂ ಆದದ್ದು, ಅವಿನಾಶಿಯಾದದ್ದು, ಅಣುವಿಗಿಂತಲೂ ಸೂಕ್ಷ್ಮವೂ, ಮಹತ್ತಿಗಿಂತಲೂ ಮಹತ್ತಾದದೂ ಆದದ್ದು. ಆ ಪರಂಜ್ಯೋತಿಯು ಬೆಳಗುವಲ್ಲಿ ಸೂರ್ಯನ ತೇಜಸ್ಸಾಗಲಿ, ಚಂದ್ರನ ತಂಪಾದ ಕಿರಣಗಳಾಗಲಿ, ಅಗ್ನಿಯ ಜ್ವಾಲೆಯಾಗಲಿ, ನಕ್ಷತ್ರಗಳ ಪ್ರಕಾಶವಾಗಲಿ ಬೆಳಗುವುದಿಲ್ಲ. ಆ ಪರಂಜ್ಯೋತಿಯಿಂದಲೇ ಸೂರ್ಯಚಂದ್ರತಾರಕೆಗಳು ಪ್ರಕಾಶಮಯವಾಗಿವೆ. ಆ ಪರತತ್ತ್ವವು ಊರ್ಧ್ವಮೂಲವೂ, ಅಧಃಶಾಖವೂ ಆಗಿರುವ ಸನಾತನ ಅಶ್ವತ್ಥವೃಕ್ಷದ ಹಾಗಿದೆ."

**ಆತ್ಮಪ್ರಾಪ್ತಿಯ ಉಪಾಯಗಳು:** ಹೃದಯಾಕಾಶದಲ್ಲಿ ಬೆಳಗುವ ಆತ್ಮನನ್ನು ವೀತಶೋಕನಾದವನು ಮಾತ್ರ ಕಾಣಲು ಸಾಧ್ಯ. ಮಾಯೆಯ ಪ್ರಭಾವವನ್ನು ಪ್ರಬಲಗೊಳಿಸುವ ಶೋಕವನ್ನು ದಾಟಿದಾಗ ಮಾತ್ರ ಆತ್ಮಸಾಕ್ಷಾತ್ಕಾರ ಸಾಧ್ಯ. **ಧಾತುಃಪ್ರಸಾದಾತ್ ಮಹಿಮಾನಮೀಶಮ್** – ಸಪ್ತಧಾತುಗಳ ಪ್ರಸನ್ನತೆಯಿಂದ ಆತ್ಮತತ್ತ್ವವು ಬೆಳಗುವುದು. ಇವೆಲ್ಲಕ್ಕೂ ಮಿಗಿಲಾಗಿ ಎಲ್ಲ ಶೋಕವನ್ನೂ ದಾಟುವ ಒಂದು ಉಪಾಯವುಂಟು. ಕಠೋಪನಿಷತ್ತು ಹೀಗೆ ಹೇಳುತ್ತದೆ:

**ನಾಯಮಾತ್ಮಾ ಪ್ರವಚನೇನ ಲಭ್ಯಃ**
**ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯಃ**
**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥**

"ಪ್ರವಚನಗಳಿಂದಾಗಲಿ, ಮೇಧಾಶಕ್ತಿಯಿಂದಾಗಲಿ ದೊರಕದ ಆತ್ಮತತ್ತ್ವವು, ತಾನೇ ಯಾರನ್ನು ಆರಿಸಿಕೊಳ್ಳುತ್ತದೆಯೋ, ಅಂತಹ ವ್ಯಕ್ತಿಗಳಿಂದ ಮಾತ್ರ ಅರಿಯಲು ಸಾಧ್ಯವಾಗುವಂಥದು."

ಆತ್ಮನೇ ರಥಿ; ಶರೀರವೇ ರಥ; ಬುದ್ಧಿಯೇ ಸಾರಥಿ. ಮನಸ್ಸೇ ಲಗಾಮು; ಇಂದ್ರಿಯಗಳೇ ಕುದುರೆಗಳು. ಮನಸ್ಸಿನ ಮೇಲೆ ಮತ್ತು ಮನೋವೃತ್ತಿಗಳ ಮೇಲೆ ಹಿಡಿತ ಸಾಧಿಸಿದಾಗಲೇ ಪರಮಪದ ಪ್ರಾಪ್ತಿಯಾಗುವುದು.

**ಉಪಸಂಹಾರ:** ಬಹಿರ್ಮುಖವಾಗಿಯೇ ಸೃಷ್ಟಿಯಾಗಿರುವ ಇಂದ್ರಿಯಗಳನ್ನು ಒಳಮುಖವಾಗಿಸಿ ಆತ್ಮತತ್ತ್ವವನ್ನು ಅರಿಯಬೇಕಾಗಿದೆ. ಈಗಲೇ, ಈ ಕ್ಷಣದಿಂದಲೇ ಆತ್ಮದ ಬಗೆಗಿನ ವ್ಯಾಕುಲತೆ ನಮ್ಮಲ್ಲಿ ಬರಬೇಕಾಗಿದೆ.

**ಇಹ ಚೇದಶಕದ್ಬೋದ್ಧುಂ ಪ್ರಾಕ್ಶರೀರಸ್ಯ ವಿಸ್ರಸಃ ।**
**ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥**

"ಈ ಶರೀರವು ನಾಶವಾಗುವ ಮೊದಲೇ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಮತ್ತೆ ಮತ್ತೆ ಜನ್ಮ ಮೃತ್ಯು ರೂಪವಾದ ಸಂಸಾರಚಕ್ರದಲ್ಲಿ ಸಿಲುಕಿ ನಲುಗಬೇಕಾಗುತ್ತದೆ." ಆದುದರಿಂದ ಉಪನಿಷತ್ತು ನಮಗೆಲ್ಲರಿಗೂ ಕರೆಕೊಡುತ್ತದೆ: **ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ** – "ಏಳಿ, ಎದ್ದೇಳಿ, ಬಲ್ಲವರನ್ನು ಸಮೀಪಿಸಿ, ತಿಳಿದುಕೊಳ್ಳಿ." ಹೀಗಾಗಿ ನಾವೆಲ್ಲರೂ ಈಗಲೇ ಜಾಗೃತರಾಗಬೇಕಾದ ಆವಶ್ಯಕತೆ ಇದೆ. ಸ್ವಾಮಿ ವಿವೇಕಾನಂದರು ಈ ಉಕ್ತಿಯನ್ನು ತಮ್ಮ ಉಪನ್ಯಾಸಗಳಲ್ಲಿ ಅನೇಕ ಕಡೆ ಅತ್ಯಂತ ಪ್ರೀತಿಯಿಂದ ಉದ್ಧರಿಸುತ್ತಿದ್ದರು. ಮಾನವನು ಎಚ್ಚೆತ್ತು ಜಾಗೃತನಾಗಿ ಪರಮಾರ್ಥ ವಿಷಯದಲ್ಲಿ ಕುಶಲಿಯಾದಲ್ಲಿ ಮಾತ್ರ ಈ ಭವಸಾಗರವನ್ನು ದಾಟುವುದು ಅತ್ಯಂತ ಸುಲಭ ಸಾಧ್ಯವಾಗುವುದು.

**ಸಹೃದಯಹೃದಿ ಪರಂಜ್ಯೋತಿರ್ದೀಪ್ಯತಾಂ ಭಾರತೇ ಮೇ**

ನಮ್ಮೆಲ್ಲರ ಹೃದಯದಲ್ಲಿ ಉಪನಿಷತ್ತುಗಳಲ್ಲಿ ಪ್ರತಿಪಾದ್ಯವಾದ ಪರಂಜ್ಯೋತಿಯು ಬೆಳಗಿ ನಾವು 'ಭಾ'ರತರು (ಬೆಳಗುವಂಥವರು) ಆಗುವಂತೆ ಸ್ವಾಮಿ ವಿವೇಕಾನಂದರು ನಮ್ಮನ್ನು ಅನುಗ್ರಹಿಸಲಿ.



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

**ಛಾಯಾಚಿತ್ರ ೪೦**

ಈ ಚಿತ್ರದ ಮೂಲಪ್ರತಿಯಲ್ಲಿ ಸಹಸ್ರದ್ವೀಪೋದ್ಯಾನದಲ್ಲಿರುವ 'ರಾವಲ್‌ಸನ್ ಮತ್ತು ವ್ಯಾನ್‌ಕ್ಯಾಂಪ್' ಎಂಬ ಸ್ಟುಡಿಯೋದ ಹೆಸರನ್ನು ನಮೂದಿಸಲಾಗಿತ್ತು. ಈ ಚಿತ್ರವು Head and Shoulder ಎಂದೇ ಪ್ರಸಿದ್ಧವಾಗಿದೆ.



ಚಿತ್ರ : ೪೦

ಇದು ಸಹಸ್ರದ್ವೀಪೋದ್ಯಾನದಲ್ಲಿ ತೆಗೆದ ಚಿತ್ರವಾಗಿದೆ. ಸ್ವಾಮೀಜಿ ಸಹಸ್ರದ್ವೀಪೋದ್ಯಾನದಲ್ಲಿ ಆರು ವಾರಗಳ ಕಾಲ ಇದ್ದರು. ತಮ್ಮ ತರಗತಿಗಳನ್ನು ೧೮೯೫ರ ಆಗಸ್ಟ್ ೬ ರಂದು ಕೊನೆಗೊಳಿಸಿದರು.

ಅವರ ಮೂಲಕ ಮೊಟ್ಟಮೊದಲ ಬಾರಿಗೆ ಒಂದು ಘನ ಸತ್ಯವನ್ನು ಅಲ್ಲಿ ನೆರೆದಿದ್ದ ಶಿಷ್ಯರೆಲ್ಲ ಕಂಡುಕೊಂಡರು. ಅವರು ಅಲ್ಲಿ ಮಾಡಿದ ಬೋಧನೆಗಳು ಅತ್ಯಂತ ಪ್ರಭಾವಶಾಲಿಯೂ, ಸಾಧಕನನ್ನು ಹುರಿದುಂಬಿಸಿ, ಬಡಿದೆಚ್ಚರಿಸುವಂಥವೂ ಆಗಿವೆ. ತ್ಯಾಗ ವೈರಾಗ್ಯಗಳ ಪ್ರಖರತೆಯಿಂದ ಕೂಡಿದ 'ಸಂನ್ಯಾಸಿ ಗೀತೆ' (Song of Sannyasin) ಕವಿತೆಯನ್ನು ಸ್ವಾಮೀಜಿ ರಚಿಸಿದ್ದು ಇಲ್ಲಿಯೇ.

**ಛಾಯಾಚಿತ್ರ ೪೧**

೧೮೯೫ರ ಅಕ್ಟೋಬರ್ ೨೨ ನೆಯ ತಾರೀಖಿನಿಂದ ಮೊದಲಾಗುವ ಹಾಗೆ ಲಂಡನ್ನಿನ ಪ್ರಿನ್ಸಸ್ ಹಾಲ್ ಎಂಬ ಸಭಾಂಗಣದಲ್ಲಿ ಸ್ವಾಮೀಜಿಯ ಕೆಲವು ಸ್ನೇಹಿತರು ಅವರ



ಚಿತ್ರ : ೪೧

ಸಾರ್ವಜನಿಕ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಅದಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್ ೨೦ ರಂದು ಲಂಡನ್ನಿನ ರಿಜೆಂಟ್ ರಸ್ತೆಯಲ್ಲಿರುವ ವಾಲ್ಟರಿ ಫೋಟೋಗ್ರಾಫರ್ಸ್ ಎಂಬ ಸ್ಟುಡಿಯೋಗೆ ಸ್ವಾಮೀಜಿಯವರನ್ನು ಕರೆದುಕೊಂಡು ಹೋಗಿ ಅಲ್ಲಿ ಒಟ್ಟು ಆರು ಚಿತ್ರಗಳನ್ನು ತೆಗೆಸಿದರು. ಈ ಚಿತ್ರ ಅವುಗಳಲ್ಲಿ ಒಂದು.

ಈ ಚಿತ್ರವನ್ನು ಮರುದಿನವೇ, ಅಂದರೆ ಅಕ್ಟೋಬರ್ ೨೧ ರಂದು ಡೈಲಿ ಗ್ರಾಫಿಕ್ ಎಂಬ ಸಚಿತ್ರ ದಿನಪತ್ರಿಕೆಯು ಪ್ರಕಟಿಸಿತು. ಅದರಲ್ಲಿ 'ಲಂಡನ್ನಿನಲ್ಲಿ ಒಬ್ಬ ಭಾರತೀಯ ಯೋಗಿ' ಎಂಬ ಹೆಸರಿನಲ್ಲಿ ಈ ಚಿತ್ರವನ್ನು ಪ್ರಕಟಿಸಿ, ಸ್ವಾಮೀಜಿಯವರ ಪರಿಚಯವನ್ನು ಮಾಡಿಕೊಡಲಾಗಿತ್ತು.